ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:EE/CKP/WO/126 /12-13

ಕಾರ್ಯಪಾಲಕ ಅಭಿಯಂತರರು ಕಛೇರಿ,
ಚಿಕ್ಕಪೇಟೆ ವಿಭಾಗ, ದಕ್ಷಿಣ ವಲಯ,
8ನೇ ಮುಖ್ಯ ರಸ್ತೆ, ಕನಕನ ಪಾಳ್ಯ,
ಜಯನಗರ, 2ನೇಬ್ಲಾಕ್, ಬೆಂಗಳೂರು-11
ದಿನಾಂಕ: 07-12-2012

"ಕಾರ್ಯಾದೇಶ ಪತ್ರ"

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ವ್ಯಾಪ್ತಿಯ ಪ್ಯಾಕೇಜ್ S-20 (ವಾರ್ಡ್ ಸಂಖ್ಯೆ: 144, 145ಮತ್ತು 153 ಕ್ಕೆ) ಅಹ್ವಾನಿಸಿರುವ ಘನತ್ಯಾಜ್ಯ ನಿರ್ವಹಣೆಗೆ ಕಾರ್ಯಾದೇಶ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ನಅಇ 745 ಏಂಎನ್‌ವೈ 12 ದಿನಾಂಕ:18-09-2012
2. ಮಾನ್ಯ ಅಯುಕ್ತರ ಆದೇಶ ಪತ್ರದ ಸಂಖ್ಯೆ:ಅಯುಕ್ತರು/ಪಿ.ಎಸ್.ಆರ್/(4)6544/2012-13 ದಿನಾಂಕ:18-09-2012
3. ಟೆಂಡರ್ ಅಧಿಸೂಚನೆ ಸಂಖ್ಯೆ:EE(BG)e-pro/TEND/20/12-13ದಿನಾಂಕ 18-9-2012
4. ತಿದ್ದುಪಡಿ ಟೆಂಡರ್ ಅಧಿಸೂಚನೆ ಸಮಸಂಖ್ಯೆ ದಿನಾಂಕ 20-9-2012
5. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದ ಅಧಿಕ ವಿಷಯದ ಸಂಖ್ಯೆ: 01(279),02(280),03 (281),04(282),05 (283), 06(284), 07(285), 08(286)/12-13 ದಿನಾಂಕ: 30-10-2012.
6. ಈ ಕಛೇರಿಯ ಒಪ್ಪಿಗೆ ಪತ್ರದ ಸಂಖ್ಯೆ: ಕಾ.ಪಾ.ಅ(ಚಿ.ಪೇ)/ಪಿ.ಆರ್/696 /12-13 ದಿನಾಂಕ: 31-10-2012
7. ವಿಜಯ ಬ್ಯಾಂಕ್ ಏನ್. ಆರ್ ರಸ್ತೆ ಬೆಂಗಳೂರು ರವರು ದಿನಾಂಕ 07/11/2012 ರಂತೆ ನೀಡಿರುವ ಕಾರ್ಯಾಧಾರಿತ ಭದ್ರತಾ ಠೇವಣಿ ರೂ. 6,48,000/- (ಆರು ಲಕ್ಷ ನಲವತ್ತ ಎಂಟು ಸಾವಿರ) ಗಳಿಗೆ ದಿನಾಂಕ: 07/02/2016 ರವರೆಗೆ ಚಾಲನೆಯಲ್ಲಿರುವಂತೆ.
8. ಸರ್ಕಾರದ ಆದೇಶ ಸಂಖ್ಯೆ: ನಅಇ 793 ಏಂಎನ್‌ವೈ 12 ದಿನಾಂಕ: 21-11-2012
10. ಘನತ್ಯಾಜ್ಯ ನಿರ್ವಹಣೆಯ ಸಂಬಂಧ ದಿನಾಂಕ: 07/12/2012 ರಿಂದ ಜಾರಿಗೆ ಬರುವಂತೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ಸಂಖ್ಯೆ:EE/CKP/AGREE/126/12-13

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ರೀತ್ಯಾ, ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳಂತೆ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ಸಾಗಣೆ) ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯ ವ್ಯಾಪ್ತಿಯ ಪ್ಯಾಕೇಜ್ ಸಂಖ್ಯೆ ಎಸ್-20ರ 144, 145ಮತ್ತು 153 ನೇ ವಾರ್ಡ್‌ಗಳ ಹೊಂಬೇಗೌಡನಗರ ಉಪ ವಿಭಾಗದಲ್ಲಿ ತಮ್ಮ ಗುತ್ತಿಗೆಯು ಅಂಗೀಕೃತವಾಗಿರುತ್ತದೆ. ತಾವು ನೀಡಿರುವ ಕಾರ್ಯಯೋಜನೆಯಂತೆ ಪ್ರತಿ ದಿನ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸಲು ಮಾಸಿಕ ಗುತ್ತಿಗೆ ಮೊತ್ತ ರೂ. 26,03,736 ರಂತೆ (ಇಪ್ಪತ್ತ ಆರು ಲಕ್ಷದ ಮೂರು ಸಾವಿರದ ಏಳು ನೂರ ಮೂವತ್ತ ಆರು ರೂ.ಗಳು) ತಮಗೆ ದಿನಾಂಕ: 07/12/2012 ರಿಂದ ಜಾರಿಗೆ ಬರುವಂತೆ ಕಾರ್ಯಾದೇಶ ನೀಡಲಾಗಿದೆ. ಸದರಿ ಕಾರ್ಯಾದೇಶವು ದಿನಾಂಕ: 07/12/2012 ರಿಂದ ದಿನಾಂಕ: 10/12/2015 ರವರೆಗೆ ಚಾಲ್ತಿಯಲ್ಲಿರುತ್ತದೆ. ಹಾಗೂ ನೀವು ಒಪ್ಪಿರುವಂತೆ ದಿನಾಂಕ: 11/12/2012ರಿಂದ ಪೂರ್ಣ ಪ್ರಮಾಣದಲ್ಲಿ ಕೆಲಸ ನಿರ್ವಹಿಸಲು ಈ ಮೂಲಕ ಸೂಚಿಸಿದೆ.

ಕಾರ್ಯಯೋಜನೆಯಂತೆ ಒದಗಿಸಬೇಕಾದ ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳು

1) ಪೌರ ಕಾರ್ಮಿಕರು (ಪ್ರತಿ ಪೌರಕಾರ್ಮಿಕರ ಜೊತೆ ಒಂದು ತಳ್ಳುವ ಗಾಡಿ ಇರಬೇಕು) : 79 (ಎಪ್ಪತ್ತೊಂಬತ್ತು)No.s
2) ಮೇಲ್ವಿಚಾರಕರು : 10 (ಹತ್ತು)No.s
3) ಆಟೋಟಿಪ್ಪರ್ (ಪ್ರತಿ ಆಟೋ ಜೊತೆ ಒಬ್ಬ ಪೌರ ಕಾರ್ಮಿಕರಿರಬೇಕು) : 49 (ನಲವತ್ತೊಂಬತ್ತು)No.s
4) ಟಿಪ್ಪರ್ ಲಾರಿ(ಪ್ರತಿ ಲಾರಿಗೆ ಸಾಲ್ವರು ಪೌರ ಕಾರ್ಮಿಕರಿರಬೇಕು) : 02 (ಎರಡು) No.s

5) ಕಾಂಪ್ಯಾಕ್ಟರ್(ಪ್ರತಿ ಕಾಂಪ್ಯಾಕ್ಟರ್ ಜೊತೆ ಒಬ್ಬ ಪೌರ ಕಾರ್ಮಿಕರಿರಬೇಕು) : 04 (ನಾಲ್ಕು) No.s

6) ಕಾರ್ಮಿಕರ ಸಮವಸ್ತ್ರ ಮತ್ತು ಭದ್ರತಾ, ಸ್ವಚ್ಛತಾ ನಿರ್ವಹಣೆ ಸಲಕರಣೆಗಳು

ಗುತ್ತಿಗೆದಾರರು ಮೊದಲನೇ ಮಾಹೆಯ ಕೆಲಸಕ್ಕೆ ಬಿಲ್ ಸಲ್ಲಿಸುವ ಸಮಯದಲ್ಲಿ ಎಲ್ಲಾ ಕಾರ್ಮಿಕರಿಗೆ ಮಾಸಿಕ ವೇತನವನ್ನು ಚೆಕ್/ಇ.ಸಿ.ಎಸ್/ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಿರುವ ಬಗ್ಗೆ, ಇ.ಎಸ್.ಐ ಮತ್ತು ಪಿ.ಎಫ್ ನೊಂದಣಿ ಮಾಡಿಸಿರುವ ಹಾಗೂ ವಂತಿಕೆ ಪಾವತಿಸಿರುವ ಚಲನ್‌ನ ನಕಲು ಪ್ರತಿಯನ್ನು ಒದಗಿಸುವುದು ಹಾಗೂ ಇದೇ ಕ್ರಮವನ್ನು ಪ್ರತಿ ತಿಂಗಳು ಅನುಸರಿಸಲು ಸೂಚಿಸಲಾಗಿದೆ. ಕಾರ್ಮಿಕರಿಗೆ ಪಿಎಫ್ ವಂತಿಕೆ ಪಾವತಿಸುವ ಕಾರ್ಯವನ್ನು ಆನ್‌ಲೈನ್‌ಗೆ ಅಳವಡಿಸಲು ತಿಳಿಸಿದೆ. ಹಾಗೂ ಗುತ್ತಿಗೆದಾರರು ಪ್ರತಿ ದಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಹಾಜರಾತಿ ವಾಹನ ಸಂಖ್ಯೆ ಹಾಗೂ ಕೆಲಸದ ಪ್ರಗತಿಯ ವರದಿಯನ್ನು ಸಲ್ಲಿಸಲು ಸೂಚಿಸಿದೆ.

ಈ ಕಾರ್ಯಾದೇಶವು ಗುತ್ತಿಗೆ ಕರಾರು ಷರತ್ತು ಮತ್ತು ನಿಬಂಧನೆಗಳು ಹಾಗೂ ಇನ್ನು ಮುಂದೆ ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಸಂಬಂಧಿಸಿದಂತೆ ಪಾಲಿಕೆಯು ಆಗಿಂದಾಗ್ಗೆ ಕಛೇರಿ ಆದೇಶ/ಸುತ್ತೋಲೆಯಲ್ಲಿ ನೀಡುವ ಎಲ್ಲಾ ಸಲಹೆ/ಸೂಚನೆಗಳಿಗೆ ಒಳಪಟ್ಟಿರುತ್ತದೆ.

ಕಾರ್ಯನಿರ್ವಾಹಕ ಅಭಿಯಂತರರು
ಚಿಕ್ಕಪೇಟೆ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ರವರಿಗೆ,
ಶ್ರೀ. ಎನ್ ಮಂಜುನಾಥ್ ಮಾಲಿಕರು,
ಮೆ// ಮಂಜುನಾಥ ಎಂಟೆರ್‌ಪ್ರೈಸಸ್,
ನಂ.172, 4ನೇ ಅಡ್ಡರಸ್ತೆ, ಬಿ. ಚಂದ್ರಪ್ಪ ನಗರ,
ಆಡುಗೋಡಿ ಪೋಸ್ಟ್, ಬೆಂಗಳೂರು-560030.

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಉಪ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
3. ಮಾನ್ಯ ಆಯುಕ್ತರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಮಾನ್ಯ ಅಪರ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
7. ಮಾನ್ಯ ಅಪರ/ಜಂಟಿ ಆಯುಕ್ತರು (ದಕ್ಷಿಣ ವಲಯ) ರವರ ಅವಗಾಹನೆಗೆ ಸಲ್ಲಿಸಿದೆ
8. ಮುಖ್ಯ ಲೆಕ್ಕಾಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ,
9. ಮುಖ್ಯ ಅಭಿಯಂತರರು(ದಕ್ಷಿಣ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
10. ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) ರವರ ಅವಗಾಹನೆಗೆ ಸಲ್ಲಿಸಿದೆ.
11. ಸಹಾಯಕ ನಿಯಂತ್ರಕರು(ಹಣಕಾಸು) ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
12. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
13. ಕಛೇರಿ ಕಡತಕ್ಕೆ.

ಕಾರ್ಯನಿರ್ವಾಹಕ ಅಭಿಯಂತರರು
ಚಿಕ್ಕಪೇಟೆ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.